ಓ ಎಸ್ ನಂ. 504/2018

ಡಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 26.03.2025

**ಪಾಟೀ ಸವಾಲುಃ- ಶ್ರೀ ಸಿ ಎಸ್ ಕೆ ವಾದಿ ಪರ ವಕೀಲರಿಂದ**

ಸರ್ವೆ ನಂಬರ್ 62ರಲ್ಲಿ ನಮಗೆ ಒಂಭತ್ತುಕಾಲು ಗುಂಟೆ ಜಮೀನಿದೆ. ನಮ್ಮ ಆಸ್ತಿಯ ಚೆಕ್ಕುಬಂದಿ ಗೊತ್ತಿಲ್ಲ. ನಮ್ಮ ಜಮೀನಿನ ಪೂರ್ವಕ್ಕೆ ರಂಗೇಗೌಡರವರ ಜಮೀನು ನಂತರ ಕಾಳಮ್ಮ ಅವರ ಜಮೀನು ಎಂದರೆ ಸಾಕ್ಷಿಯು ರಂಗೇಗೌಡರವರ ಜಮೀನು ಇಲ್ಲ, ಕಾಳಮ್ಮ ಅವರ ಜಮೀನು ಇದೆ ಎನ್ನುತ್ತಾರೆ. ಕಾಳಮ್ಮ ಅವರ ಜಮೀನಿನ ನಂತರ ಸರ್ಕಾರಿ ಕಟ್ಟೆ ಇದೆ ಎಂದರೆ ಸರಿಯಲ್ಲ. ಸರ್ಕಾರಿ ಕಟ್ಟೆಯ ಪಕ್ಕದಲ್ಲಿ ವಾದಿಯರ ಜಮೀನು ಇದೆ ಎಂದರೆ ಸರಿ. ವಾದಿ ಮತ್ತು ಅವರ ಸಹೋದರರು ತಲಾ 1 ಎಕರೆಯಂತೆ ತಮ್ಮ ನಡುವೆ ಹಂಚಿಕೆ ಮಾಡಿಕೊಂಡಿದ್ದಾರೆ ಎಂದರೆ ಸರಿ. ವಾದಿಯ ಜಮೀನಿನ ಸರ್ವೆ ನಂಬರ್ 125 ಎಂದರೆ ನನಗೆ ಗೊತ್ತಿಲ್ಲ. ವಾದಿಯ ಜಮೀನಿನ ಸ್ವಲ್ಪ ಜಮೀನನ್ನು ನಾನು ಒತ್ತುವರಿ ಮಾಡಿ ತೆಂಗಿನ ಸಸಿಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿಯಲ್ಲ. ರೆವೆನ್ಯೂ ಅಧಿಕಾರಿಗಳು ಸ್ಥಳ ತನಿಖೆ ನಡೆಸಿ ನಾವು ವಾದಿಯ ಜಮೀನನ್ನು ಒತ್ತುವರಿ ಮಾಡಿದ್ದೇವೆ ಎಂದು ವರದಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ನಂತರದ 4 ಜಮೀನುಗಳನ್ನು ದಾಟಿ ಹೋಗಿ ನಾನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 125ರಲ್ಲಿ ನನಗೆ ಸೇರಿದ ಯಾವುದೇ ಆಸ್ತಿ ಇಲ್ಲವೆಂದರೆ ಈಗ ಹೊಸದಾಗಿ ಸರ್ವೆ ನಂಬರ್ ಆಗಿರಬಹುದು. ವಾದಿಯರ ದಾವಾಸ್ತಿಯನ್ನು ನಾನು ಒತ್ತುವರಿ ಮಾಡಿ ತೆಂಗಿನ ಸಸಿಗಳನ್ನು ನೆಟ್ಟಿರುತ್ತೇನೆ ಎಂದರೆ ಸರಿಯಲ್ಲ. ಜಮೀನನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ .

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

Sd/-

3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.

ಚನ್ನರಾಯಪಟ್ಟಣ.